Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President

Volume 39 | Issue - 18 | 31st October 2024

## ದೀಪಾವಳಿ ಆಚರಣೆ
## ಮತ್ತು
## ಕಲ್ಚರಲ್ ಪ್ರಾಕ್ಟೀಸ್

**Time : 7.00 p.m.**
**Venue : Hotel Shivaprasad Grand, Kundapura**



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

39th year of Service and Fellowship

## ವಾರದ ಸಭೆಯ ವರದಿ
























ಕಳೆದ ವಾರದ ಸಭೆಯು ಅಕ್ಟೋಬರ್ ತಿಂಗಳಿನ Rotary Get together ಆಗಿ ಆಚರಿಸಬೇಕೆಂದು PP ರೊ. ಶ್ರೀನಾಥ್ ರಾವ್‌ರವರ ಆಶಯವಾಗಿದ್ದರಿಂದ ಸುಂದರವಾದ ಪ್ರಕೃತಿಯ ತಾಣ ಹಾಗೂ ನದಿಯ ತಟದಲ್ಲಿರುವ ಕುಂದಾಪುರದ Forest Guest Houseನ ಹೊರಾಂಗಣವನ್ನು ಅವರು ಆಯ್ಕೆ ಮಾಡಿ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಸಂಜೆಯ ತಂಪಾದ ವಾತಾವರಣದಲ್ಲಿ ರೊ. ಶ್ರೀನಿವಾಸ ಶೇಟ್ ರವರ ಪ್ರಾರ್ಥನೆಯೊಂದಿಗೆ ಸಭೆಯು ಆರಂಭಗೊಂಡಿತು. ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರು ವಾರದ ವರದಿಯನ್ನು ಸಭೆಗೆ ವಾಚಿಸಿ, ರೊ. ಸತ್ಯನಾರಾಯಣ ಪುರಾಣಿಕರು ವಾರದ ಚಿಂತನೆಯನ್ನು ತಿಳಿಸಿದರು. ರೊ. ಜಿ. ಶ್ರೀಧರ ಶೆಟ್ಟಿ ಅವರು ರೋಟರಿ ಮಾಹಿತಿಯನ್ನು ಸಭೆಗೆ ನೀಡುತ್ತಾ, ಕೊನೆಗೆ Forest Guest House ನಂತಹ ಸುಂದರ ವಾತಾವರಣದಲ್ಲಿ ನಡೆಸುತ್ತಿರುವ ಸಭೆಯಲ್ಲಿ ನಾನು ಭಾಗವಹಿಸುತ್ತಿರುವುದು ಇದೇ ಮೊದಲ ಬಾರಿಗೆ ಎಂದು ಪ್ರಶಂಸಿಸಿದರು.

ಇಡೀ ಕಾರ್ಯಕ್ರಮದ ಸಂಪೂರ್ಣ ಪ್ರಾಯೋಜಕತ್ವವನ್ನು ಏಕಾಂಗಿಯಾಗಿ ವಹಿಸಿಕೊಂಡ PP ರೊ. ಶ್ರೀನಾಥ್ ರಾವ್‌ರವರ ಹೃದಯವಂತಿಕೆಯನ್ನು ರೊ. ಮಹೇಂದ್ರ ಶೆಟ್ಟಿಯವರು ಮುಕ್ತ ಕಂಠದಿಂದ ಶ್ಲಾಘಿಸಿ, ಅವರ ವೃತ್ತಿ ಜೀವನದಲ್ಲಿ ಏಳ್ಗೆಯನ್ನು ಸಾಧಿಸಲಿ ಎಂದು ಸದಸ್ಯರೆಲ್ಲರ ಪರವಾಗಿ ಕೇಳಿಕೊಂಡರು. ಅಧ್ಯಕ್ಷರ ನುಡಿಯಲ್ಲಿ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸರವರು ಕೂಡಾ PP ರೊ. ಶ್ರೀನಾಥ್ ರಾವ್‌ರವರ ಸಂಘಟನಾ ಚಾತುರ್ಯದಿಂದಾಗಿ ದೊಡ್ಡ ಸಂಖ್ಯೆಯಲ್ಲಿ ಸದಸ್ಯರು ಇಂದಿನ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದು ಎಲ್ಲಾ ಸದಸ್ಯರಿಗೂ ಅವರ ಮೇಲಿರುವ ಅಭಿಮಾನವನ್ನು ತೋರಿಸುತ್ತದೆ. ನವೆಂಬರ್ 3ರಂದು ನಡೆಯುವ ಸಾಂಸ್ಕೃತಿಕ ಸ್ಪರ್ಧೆಯ ತಯಾರಿಯ ಬಗ್ಗೆ ಹಾಗೂ ಅದರಲ್ಲಿ ಭಾಗವಹಿಸುವ ಕ್ಲಬ್ ಸದಸ್ಯರು, ಆ್ಯನ್, ಆ್ಯನೆಟ್, ಜೊನ್ ರವರ ಹೆಸರನ್ನು ಸಭೆಗೆ ತಿಳಿಸಿದರು. ನವಂಬರ್ 23–24 ರಂದು ಬ್ರಹ್ಮಾವರದಲ್ಲಿ ನಡೆಯುವ **"ನವನಿಧಿ 2024",** District Seminar on Rotary Foundation (TRF) ಹಾಗೂ Polio Plus ಎರಡು ಕಾರ್ಯಕ್ರಮಗಳಲ್ಲಿ ಕ್ರಮವಾಗಿ ನಮ್ಮ ಕ್ಲಬ್ಬಿನ ಸದಸ್ಯರಾಗಿರುವ ರೊ. ಸತ್ಯನಾರಾಯಣ ಪುರಾಣಿಕ್ ಹಾಗೂ ರೊ. ಡಾ. ಪ್ರಿಯಾಂಕ ಜೋಗಿ ಇವರು chairman ಗಳಾಗಿದ್ದು, ಈ ಎರಡು ಕಾರ್ಯಕ್ರಮಗಳ ಮುತುವರ್ಜಿಯನ್ನು ಅವರು ವಹಿಸಿಕೊಳ್ಳಬೇಕಾಗಿ ಅಧ್ಯಕ್ಷರು ಕೇಳಿಕೊಂಡರು ಹಾಗೂ ಎಲ್ಲಾ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಹಕರಿಸಬೇಕಾಗಿ ಹೇಳಿಕೊಂಡರು.

ರೊ. ಡಾ. ಉತ್ತಮ ಕುಮಾರ್ ಶೆಟ್ಟಿ ಅವರ ಚುಟುಕದ ನಗೆ ಚಟಾಕಿಯು ನೆರೆದಿದ್ದವರನ್ನು ರಂಜಿಸಿತು. ರೊ. ಅನಿಲ್ ಡಿಸಿಲ್ವಾ ಲಕ್ಕಿ ರೋಟೆರಿಯನ್ ಆಗಿ ಮೂಡಿಬಂದರು. ಈ ವೈಶಿಷ್ಟ್ಯಪೂರ್ಣವಾದ ಸಭೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸುವ ಸ್ಪರ್ಧಾಳುಗಳ ವಿಶೇಷ ಅತಿಥಿಗಳು ಎಂಬ ವಿಭಿನ್ನ ವಿಷಯ ಮಾತ್ರವಲ್ಲದೆ ರೊ. ಮಹೇಂದ್ರ ಶೆಟ್ಟಿ ಅವರು ಕುಂದಕನ್ನಡದ ಹಾಡಿನ ಜೊತೆ ಕುಂದಾಪುರ ಕನ್ನಡವನ್ನು ಹೊಗಳುತ್ತಾ.. ಕುಂದಗನ್ನಡದಲ್ಲಿ ವಿಭಿನ್ನ ರೀತಿಯಲ್ಲಿ ಧನ್ಯವಾದ ಸಮರ್ಪಣೆಗೈದಿದ್ದು ಸಭೆಯು ಲವಲವಿಕೆಯಿಂದ ಸಮಾಪ್ತಿಗೊಳ್ಳುವಂತಾಯಿತು. ಶುಚಿ ರುಚಿಯಾದ ಭೋಜನ ವ್ಯವಸ್ಥೆ ಎಲ್ಲರನ್ನೂ ಸಂತೃಪ್ತಿಗೊಳಿಸಿತು.











ತಲ್ಲೂರು ಮತ್ತು ಉಪ್ಪಿನಕುದ್ರು ಗ್ರಾಮಗಳಲ್ಲಿ ಕಡಿಮೆ ತೂಕವಿದ್ದ 5 ಮಕ್ಕಳಿಗೆ ಅವರ ತಾಯಂದಿರ ಕೋರಿಕೆಯ ಮೇರೆಗೆ ತಾ. 15–10–2024ರಂದು ಆಶಾ ಕಾರ್ಯಕರ್ತೆಯರ ಮುಖೇನ ಎರಡನೇ ಬಾರಿ ಪ್ರೊಟೀನ್ ಪೌಡರ್ ವಿತರಿಸಲಾಯಿತು.

**Rotary Information**

## Some Rotary Firsts

- The first Rotary Club meeting was held in Chicago, Illinois on February 23,1905.
- The first regular luncheon meetings were chartered in 1909 in Oakland, California.
- The first Rotary Convention was held in Chicago in 1910.
- The first Rotary club outside the United States was chartered in 1910 in Winnipeg, Manitoba, Canada.
- The first Rotary Club outside of North America was chartered in 1911 in Dublin, Ireland.
- The first Rotary Club in a non-English speaking country was in Havana, Cuba in 1916.
- The first Rotary Club in South America was chartered in 1918 in Montevideo, Uruguay.
- The first Rotary Club in Asia was chartered in 1919 in Manila, Philippines.
- The first Rotary Club in Africa was chartered in 1921 in Johannesburg, South Africa.
- The first Rotary Club in Australia was chartered in Melbourne in 1921. (Original idea from "Scandal Sheet")

**by Rtn G. Shridhar Shetty**

Smiling is the best way to face every problem, crush every fear, and hide every pain.

ನಮ್ಮ ಆಲೋಚನೆಗಳೇ ನಮ್ಮನ್ನು ರೂಪಿಸುತ್ತವೆ. ಆದ್ದರಿಂದ ಏನನ್ನು ಯೋಚಿಸುತೀರೋ ಅದರ ಬಗ್ಗೆ ಎಚ್ಚರದಿಂದಿರಿ.

**– ಸ್ವಾಮಿ ವಿವೇಕಾನಂದ**

